# ಮೈಸೂರು ದೊರೆಗಳ ಮೊದಲ ದಸರಾ!

ಚಿತ್ರ– ಲೇಖನ:
**ಗಣಂಗೂರು ನಂಜೇಗೌಡ**



ನವರಾತ್ರಿ ಹಬ್ಬದ ಆಚರಣೆಗೆ ಸಾಕ್ಷಿ ಈ ಶ್ರೀರಂಗನಾಥ ದೇವಾಲಯ

ವಿಜಯನಗರದ ರಾಜಧಾನಿ ಹಂಪಿಯಲ್ಲಿ ನಡೆಯುತ್ತಿದ್ದ ದಸರಾ ಉತ್ಸವ ತಾಳಿಕೋಟೆ ಯುದ್ಧದ ತರುವಾಯ ಮೈಸೂರಿನ ಯದು ವಂಶದ ಅರಸರ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಆರಂಭವಾಯಿತು.

ರಾಜ ಒಡೆಯರ್ (1578–1617) 1610ರಲ್ಲಿ ಈ ದ್ವೀಪ ಪಟ್ಟಣದಲ್ಲಿ ಸ್ವತಂತ್ರ ದೊರೆಯಾಗಿ ಅಧಿಕಾರಕ್ಕೇರುವ ಜತೆಗೆ ನವರಾತ್ರಿ ಉತ್ಸವವು ವಿಜೃಂಭಣೆಯಿಂದ ನಡೆಯುವಂತೆ ನಿಬಂಧನೆಗಳನ್ನು ಬರೆಸಿದರು. ಇದಕ್ಕೂ ಮುನ್ನ ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿ ಶ್ರೀರಂಗರಾಯ ನವರಾತ್ರಿ ಉತ್ಸವವನ್ನು ಆಚರಿಸಲೆಂದು ಶ್ರೀರಂಗನಾಥಸ್ವಾಮಿ ದೇಗುಲದ ಪೂರ್ವ ದಿಕ್ಕಿನಲ್ಲಿ ಮಹಾನವಮಿ ದಿಬ್ಬವನ್ನು ನಿರ್ಮಿಸಿ ನವರಾತ್ರಿ ಉತ್ಸವಕ್ಕೆ ಮುನ್ನುಡಿ ಬರೆದಿದ್ದರು. ಸುಮಾರು 180 ವರ್ಷಗಳ ಕಾಲ ಇಲ್ಲಿ ಸಂಭ್ರಮದಿಂದ ನಡೆದ ದಸರಾ ಉತ್ಸವ ಹೈದರ್ ಮತ್ತು ಟಿಪ್ಪು ಸುಲ್ತಾನ್ ಕಾಲದಲ್ಲಿ ಕಳೆಗುಂದಿತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲ (1799–1868)ಕ್ಕೆ ಮೈಸೂರಿಗೆ ಸ್ಥಳಾಂತರಗೊಂಡಿತು.

### ‘ಕಂಠೀರವ ನರಸರಾಜ ವಿಜಯಂ’ನಲ್ಲಿ ದಸರಾ ವರ್ಣನೆ:

ಶ್ರೀರಂಗಪಟ್ಟಣದಲ್ಲಿ ದಸರಾ ಉತ್ಸವ ಎಷ್ಟೊಂದು ವೈಭವದಿಂದ ನಡೆಯುತ್ತಿತ್ತು ಎಂಬ ಬಗ್ಗೆ ಕಂಠೀರವ ನರಸರಾಜ ಒಡೆಯರ್ (1638–1659) ಅವರ ಆಸ್ಥಾನ ಕವಿ ಗೋವಿಂದ ವೈದ್ಯ ತನ್ನ ‘ಕಂಠೀರವ ನರಸರಾಜ ವಿಜಯಂ’ ಕೃತಿಯಲ್ಲಿ (ಇದು ತಲಕಾಡಿನ ಭಾರತೀನಂಜ ವಿರಚಿತ ಕೃತಿ ಎಂಬ ವಾದವೂ ಇದೆ) ವಿವರಿಸಿದ್ದಾನೆ. ಒಟ್ಟು 28 ಸಂಧಿಗಳ ಈ ಕಾವ್ಯದಲ್ಲಿ ಮೂರು ಸಂಧಿಗಳು ಇಲ್ಲಿ ನಡೆಯುತ್ತಿದ್ದ ದಸರೆಯ ಸಂಭ್ರಮವನ್ನು ವರ್ಣಿಸುತ್ತವೆ. ‘ದಸರೆಯ ಪುರ ಶೃಂಗಾರ’ ಭಾಗದಲ್ಲಿ ವಿಜಯ ದಶಮಿ ಆಚರಣೆಯ ಸಿದ್ಧತೆಗಳನ್ನು ಸಾದ್ಯಂತವಾಗಿ ವಿವರಿಸಲಾಗಿದೆ.

‘ನವರಾತ್ರಿ ಉತ್ಸವದ ಸಲುವಾಗಿ ಪುರವನ್ನು ಸಿಂಗರಿಸಲು ನಾನಾ ದೇಶಗಳಿಂದ ಚಿತ್ರಗೆಲಸದವರನ್ನು ಕರೆಸಲು ಮಹಾರಾಜರು ಆದೇಶ ನೀಡಿದರು. ಓಲಗ ಶಾಲೆ, ಆಯುಧಗಳ ಪೂಜಾ ಗೃಹ, ಕುದರೆ ಲಾಯ, ಗಜ ಶಾಲೆಗಳು ಸಿಂಗಾರಗೊಂಡವು. ರಾಜ ಬೀದಿಗಳಲ್ಲಿ ರಂಗಿನ ಹವಳದ ತೋರಣದ ಕಾಂತಿ ಮಿನುಗಿತು. ಮರುಗ, ಮಲ್ಲಿಗೆ, ಕೆಂಜಾಜಿ, ಸಂಪಿಗೆ ಹೂ